ಸಲಾಗಿದ್ದು, ಈ ಮಾಹಿತಿಗಳನ್ನುಳ್ಳ ಪೂರ್ಣ ಪ್ರಮಾಣದ ಪ್ರಸ್ತಾವನೆಯು ಸ್ವೀಕೃತವಾದ ನಂತರ ಇವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸುವ ಬಗ್ಗೆ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಈ) ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಗ್ರಾಮ ಪಂಚಾಯಿತಿಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆಯಬೇಕಾಗುತ್ತದೆ. ಹಾಗೂ ಬೇರ್ಪಡಿಸುವ ಸರ್ವೆ ನಂಬರ್‌ಗಳು, ಗ್ರಾಮಗಳ ಬಗ್ಗೆ ಮಾಹಿತಿ, ಗ್ರಾಮಗಳು, ಅರಣ್ಯ, ಖಾಸಗಿ, ಸರ್ಕಾರಿ ಜಮೀನುಗಳಲ್ಲಿವೆಯೇ ಎಂಬ ಬಗ್ಗೆ ಖಚಿತಪಡಿಸಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಇಂತಿಷ್ಟೇ ಕಾಲಮಿತಿಯಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದೆಂದು ಹೇಳಲು ಕಷ್ಟಸಾಧ್ಯ.

ಆದಾಗ್ಯೂ ಜಿಲ್ಲಾಧಿಕಾರಿಗಳು ಗದಗ ಜಿಲ್ಲೆ, ಗದಗ ಇವರಿಂದ ಪೂರ್ಣ ಪ್ರಮಾಣದ ಮಾಹಿತಿ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಇವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸಲಾಗುವುದು.

ಅರಣ್ಯವನ್ನು ವಿಂಗಡಿಸಿರುವುದು

1075 (1364); ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ)

ಅ) ರಾಜ್ಯದಲ್ಲಿ ಅರಣ್ಯ ಪ್ರದೇಶವನ್ನು ಯಾವ ವಿವಿಧ ಪ್ರಕಾರಗಳಾಗಿ ವಿಂಗಡಿಸಲಾಗಿದೆ.

ಆ) ಹಾಗಿದ್ದಲ್ಲಿ, ಅವು ಯಾವುವು;

ಇ) ಅಂತಹ ಪ್ರದೇಶಗಳಲ್ಲಿ ರೋಣ ಮತ ಕ್ಷೇತ್ರದಲ್ಲಿ ಬರತಕ್ಕಂತಹ ಕ್ಷೇತ್ರ ಪುತ್ತು ಸ್ಥಳಗಳು ಯಾವುವು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

1. ಮೀಸಲು ಅರಣ್ಯ
2. ರಕ್ಷಿತ ಅರಣ್ಯ
3. ವರ್ಗೀಕರಿಸದ ಅರಣ್ಯ
4. ಗ್ರಾಮ ಅರಣ್ಯ
5. ಖಾಸಗಿ ಅರಣ್ಯ

ಆ) ಮೇಲಿನಂತೆ ಖಿಂಗಡಿಸಲಾಗಿದೆ.

ಇ) ರೋಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶ ಗಳ ವಿವರ ಈ ಕಳೆಗಿನಂತಿದೆ.

ಕ್ರ ಸಂ	ತಾಲ್ಲೂಕು	ಅರಣ್ಯದ ವಿವರ	ಗ್ರಾಮದ ಹೆಸರು	ಅರಣ್ಯ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	ರೋಣ	ಮೀಸಲು ಅರಣ್ಯ	ಕಲ್ಲಿಗನೂರು & ನೆಲ್ಲೂರು	361.58
2	ರೋಣ	ಅರಣ್ಯ ಇಲಾಖೆಗೆ ಹಸ್ತಾಂತರಿಸಿದ ಕಂದಾಯ ಖರಾಜು ಭೂಮಿಯ ವಿವರ (ಅ & ಆ ವರ್ಗದ	ಬಳಗೊಡ ಬೊಮ್ಮಸಾಗರದ ಇಟಗಿ ಸವಡಿ, ಶಾಂತಗೇರಿ, ನಿಡಗುಂದಿ, ನೆಲ್ಲೂರು,	6.68 318.55 3.63 1.11 132.79 2.01 71.80

		ಭೂಮಿ ಹೊರತುಪಡಿಸಿ)	ಮುತಿಗೇರಿ	11.26
			ಒಟ್ಟು	547.83
3	ಮುಂಡರಗಿ	ಮೀಜಲು ಅರಣ್ಯ	ಡೋಣಿ	3849.485
			ಡಂಬಳ	581.876
			ಹಿರೇವಡ್ಡಟ್ಟಿ	1909.554
			ಚಿಕ್ಕವಡ್ಡಟ್ಟಿ	1012.245
			ಗುಡ್ಡದ ಬೂದಿಹಾಳ	460.487
			ದಿಂಡೂರ	91.932
			ಹಾರೋಗೇರಿ	593.444
			ಶಿಂಗಟರಾಯನಕೆರೆ	426.202
			ಕೆಲೂರ	902.603
			ಮುರಡಿ	358.221
			ಅತ್ತಿಕಟ್ಟಿ	229.898
			ಒಟ್ಟು	10415.947

ಕ್ರೀಡಾಂಗಣವನ್ನು ಮಂಜೂರು ಮಾಡುವುದು

1076 (1365); ಶ್ರೀ ಗುರುಪಾದಗೌಡ ಶಿಂಗನಗೌಡ ಪಾಟೀಲ (ಡೋಣಿ)

ಅ) ರಾಜ್ಯದಲ್ಲಿ ಕ್ರೀಡಾಂಗಣವನ್ನು ಮಂಜೂರು ಮಾಡಲು ಇರುವ ಸರ್ಕಾರದ ಮಾನದಂಡಗಳೇನು;